


# ಹ್ಯಾಂಡ್

ಈ ಟ್ಯುಟೋರಿಯಲ್ನಲ್ಲಿ ಸರಳವಾದ ಹ್ಯಾಂಡ್ಬ್ಯಾಗ್ ಅನ್ನು ಹೇಗೆ ತಯಾರಿಸುವುದು ಎಂದು ನಾವು ನಿಮಗೆ ಕಲಿಸಲಿದ್ದೇವೆ.



ನಿಮ್ಮ ಮೂಡ್ಗೆ ಸರಿಹೊಂದುವಂತೆ ಬಳಸಬಹುದಾದ ವಿವಿಧ ಬ್ಯಾಗ್ಗಳನ್ನು ಹೊಂದುವಲ್ಲಿ ಸಂತೋಷಪಡುವ ನಿಮಗೆಲ್ಲರಿಗೂ... ಇಂದು ನಾವು ಸರಳ ಹ್ಯಾಂಡ್ಬ್ಯಾಗ್ಗಳನ್ನು ಹೇಗೆ ತಯಾರಿಸುವುದು ಎಂದು ಕಲಿಸಲಿದ್ದೇವೆ. ಮತ್ತು ನೀವು ಇಚ್ಛಿಸುವ ಪ್ರಿಂಟ್ಗಳಲ್ಲಿ ಬ್ಯಾಗ್ಗಳನ್ನು ಹೊಂದಲು ಹಂಬಲಿಸುವ ನಿಮಗೆಲ್ಲರಿಗೂ- ಈ ಪಾಠದ ಮೂಲಕ ನಿಮಗೆ ಅನುಸರಿಸಲು ಇದು ಸೂಕ್ತ ಸಮಯವಾಗಿದೆ. ಇದರ ಕೊನೆಯಲ್ಲಿ, ನೀವು ಉದ್ಯಮಶೀಲರಾಗಿದ್ದರೆ ನೀವು ಕೇವಲ ನಿಮಗಾಗಿ ಮಾತ್ರ ಬ್ಯಾಗ್ಗಳನ್ನು ತಯಾರಿಸುವುದಲ್ಲದೇ, ಅದನ್ನು ನಿಮ್ಮ ವಿನ್ಯಾಸದ ಸಂವೇದನೆಗಳು ಹೊಂದಿಕೆಯಾಗುವವರಿಗೆ ಮಾರಾಟವೂ ಮಾಡಬಹುದು!



ಪರಿಪೂರ್ಣವಾದ ಬ್ಯಾಗ್ಅನ್ನು ತಯಾರಿಸಲು, ನಿಮಗೆ 18 x 30 ಇಂಚು ಅಳತೆಯ ಮುದ್ರಿತ ಬಟ್ಟೆಯ ಒಂದು ತುಂಡು, 26 ಇಂಚುಗಳ ಎರಡು ಬ್ಯಾಗ್ ಪಟ್ಟಿಗಳು, ಮ್ಯಾಚಿಂಗ್ ನೂಲು, ಅಳತೆ ಮಾಪಕ, ಮಾರ್ಕರ್, ಪಿನ್ಗಳು, ಮತ್ತು ಒಂದು ಜೊತೆ ಕತ್ತರಿಗಳ ಅಗತ್ಯವಿದೆ.

ಬಟ್ಟೆಯ ತುಂಡುಗಳನ್ನು ಈ ರೀತಿಯಾಗಿ ಬಲಬದಿಗಳು ಎದುರೆದುರಾಗಿ ಬರುವಂತೆ ಮಡಚುವ ಮೂಲಕ ಪ್ರಾರಂಭಿಸಿ. ಅಂಚುಗಳನ್ನು ಹೊಂದಿಸಿ.



ಅಂಚುಗಳಿಂದ ಸ್ವಲ್ಪ ಅಂತರವನ್ನು ಇಟ್ಟುಕೊಂಡು, ತೋರಿಸಿದಂತೆ, ತೆರೆದ ಎರಡೂ ಬದಿಗಳ ಜಾಗದಲ್ಲಿ ಪಿನ್ ಮಾಡಿ. ಪ್ರತೀ ಬದಿಯಲ್ಲಿ ಮೂರು ಪಿನ್ಗಳನ್ನು ಹಾಕಿರಿ.

ಮೇಲಿನ ಭಾಗವನ್ನು ತೆರೆದಿರುವಂತೆ ಬಿಡಲು ನೆನಪಿರಲಿ.

ಹೊಲಿಗೆ ಯಂತ್ರದ ಮೇಲೆ ಬಟ್ಟೆಯನ್ನು ಇರಿಸಿ.





ಸ್ಟಿಚ್ ಪಾಟರ್ನ್ ಸೆಲೆಕ್ಟರ್ ಅನ್ನು ಎ ಗೆ ತಿರುಗಿಸಿ ಮತ್ತು ಹೊಲಿಗೆ ಉದ್ದದ ಸೆಲೆಕ್ಟರ್‌ಅನ್ನು 2 ಮತ್ತು 3 ರ ನಡುವೆ ಸೆಟ್ ಮಾಡಿ.

ಹೊಲಿಯಲು ಪ್ರಾರಂಭಿಸಿ. ರಿವರ್ಸ್ ಸ್ಟಿಚ್ ಲಿವರ್ ಬಳಸಿಕೊಂಡು ಹೊಲಿಗೆಗಳನ್ನು ನೀವು ಲಾಕ್ ಮಾಡಿದ್ದೀರಿ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ.ಅಂಚುಗಳನ್ನು ಹೊಲಿಯಿರಿ ಮತ್ತು ತುದಿಯವರೆಗೆ ಮುಂದುವರಿಸಿ. ತುದಿಯನ್ನು ಲಾಕ್ ಮಾಡಲು ಮರೆಯದಿರಿ.



ನೂಲನ್ನು ಕತ್ತರಿಸಿ.ವಿರುದ್ಧ ಬದಿಯನ್ನು ಹೊಲಿಯಲು ಅದನ್ನು ಪುನರಾವರ್ತಿಸಿ. ಎರಡೂ ಬದಿಗಳನ್ನು ನೀವು ಹೊಲಿದ ನಂತರ ಪಿನ್ಗಳನ್ನು ತೆಗೆಯಲು ನೆನಪಿರಲಿ.

ಅಂಚುಗಳಲ್ಲಿ ಒಂದನ್ನು ತ್ರಿಕೋನ ಆಕಾರ ಮಾಡಿ- ಹೀಗೆ ಮತ್ತು ಅದನ್ನು ಪಿನ್ ಮಾಡಿ.





ಅಳತೆ ಮಾಡಿ ಮತ್ತು ತ್ರಿಕೋನಾಕಾರದ ಪಾಯಿಂಟೆಡ್ ಅಂಚುಗಳಿಂದ ಎರಡೂವರೆ ಇಂಚುಗಳಲ್ಲಿ ಮಾರ್ಕ್ ಮಾಡಿ. ನಾನು ಮಾಡಿರುವಂತೆ, ಮಾರ್ಕ್ ಮಾಡಿದ ಜಾಗದಲ್ಲಿ ಅಡ್ಡಲಾಗಿ ಒಂದು ಗೆರೆಯನ್ನು ಎಳೆಯಿರಿ. ಇನ್ನೊಂದು ಬದಿಯಲ್ಲಿ ಪುನರಾವರ್ತಿಸಿ.

ಎರಡೂ ಬದಿಗಳಲ್ಲಿ ಮಾರ್ಕ್ ಮಾಡಿದ ಗೆರೆಗಳನ್ನು ಹೊಲಿಯಿರಿ. ರಿವರ್ಸ್ ಸ್ಟಿಚ್ ಲಿವರ್ ಬಳಸಿಕೊಂಡು ತುದಿಯನ್ನು ಲಾಕ್ ಮಾಡಲು ನೆನಪಿರಲಿ.



ನೂಲನ್ನು ಕತ್ತರಿಸಿ. ಎರಡೂ ಬದಿಗಳಲ್ಲಿ ಸ್ವಲ್ಪ ಅಂಚನ್ನು ಬಿಟ್ಟು, ಹೊಲಿದ ಗೆರೆಯನ್ನು ಮೀರಿದ ಮೂಲೆಗಳನ್ನು ಕತ್ತರಿಸಿ. ಇದು ಅದಕ್ಕೆ ಅಚ್ಚುಕಟ್ಟಾದ ಆಕಾರವನ್ನು ನೀಡುತ್ತದೆ ಮತ್ತು ಬೃಹತ್ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ನಂತರ, ಸುಮಾರು ಒಂದು ಇಂಚುಗಳಷ್ಟು ತೆರೆದ ಬದಿಯ ಅಂಚುಗಳನ್ನು ಮಡಚಿ. ಆ ಜಾಗದಲ್ಲಿ ಪಿನ್ ಮಾಡಿ.

ಅಳತೆ ಮಾಡಿ ಮತ್ತು ಬ್ಯಾಗ್ ಪಟ್ಟಿಗಳನ್ನು ಜೋಡಿಸಲು ಎರಡೂ ತುದಿಗಳಿಂದ ಐದು ಇಂಚು ದೂರದಲ್ಲಿ ಮಾರ್ಕ್ ಮಾಡಿ. ಇನ್ನೊಂದು ಬದಿಗೂ ಹಾಗೆಯೇ ಮಾಡಿ. ನಾನು ಅದನ್ನು ಮಾಡುತ್ತಿದ್ದಂತೆ ನನ್ನನ್ನು ಅನುಸರಿಸಿ... ಹಂತವನ್ನು ಪೂರ್ಣಗೊಳಿಸಲು ವೀಡಿಯೋವನ್ನು ತಾತ್ಕಾಲಿಕ ತಡೆಹಿಡಿಯಲು ಸಂಕೋಚ ಪಡಬೇಡಿ... ಮತ್ತು ನಂತರ ಮುಂದುವರಿಸಿ.





ಬ್ಯಾಗ್ ಪಟ್ಟಿಯ ಒಂದು ತುದಿಯನ್ನು ಮಾರ್ಕಿಂಗ್ನಲ್ಲಿ ಇರಿಸಿ, ಮಧ್ಯಕ್ಕೆ ಅದನ್ನು ಹೊಂದಿಸಿ. ಆ ಜಾಗದಲ್ಲಿ ಪಿನ್ ಮಾಡಿ. ಪಟ್ಟಿಯು ನೇರವಾಗಿದೆ ಎಂದು ಖಾತ್ರಿಪಡಿಸಿಕೊಳ್ಳಿ ಮತ್ತು ಅದೇ ಬದಿಯಲ್ಲಿ ಮಾರ್ಕಿಂಗ್ನ ಇನ್ನೊಂದು ತುದಿಯ ಮೇಲೆ ಅದನ್ನು ಹೊಂದಿಸಿ, ಪಟ್ಟಿಯ ಇನ್ನೊಂದು ತುದಿಯನ್ನು ಪಿನ್ ಮಾಡಿ. ಆ ಜಾಗದಲ್ಲಿ ಪಿನ್ ಮಾಡಿ.

ಬ್ಯಾಗ್ನ ಇನ್ನೊಂದು ಬದಿಯಲ್ಲಿನ ಎರಡನೆಯ ಪಟ್ಟಿಗೆ ಅದನ್ನೇ ಪುನರಾವರ್ತಿಸಿ.  ನಿಮ್ಮ ಮೆಶಿನ್ನಿಂದ ಬ್ಯಾಗ್‌ಅನ್ನು ತೆಗೆಯಿರಿ.





ಝಿಗ್-ಝಾಗ್ ಹೊಲಿಗೆಗಾಗಿ ಸ್ಟಿಚ್ ಪಾಟರ್ನ್ ಸೆಲೆಕ್ಟರ್ ಅನ್ನು ಸಿ ಗೆ ತಿರುಗಿಸಿ; ಮತ್ತು ಹೊಲಿಗೆ ಉದ್ದವನ್ನು 1.5 ಗೆ ಸೆಟ್ ಮಾಡಿ. ತೋರಿಸಿದಂತೆ, ಒಂದರ ನಂತರ ಇನ್ನೊಂದರಂತೆ, ಬ್ಯಾಗ್ನ ಎರಡೂ ಅಂಚುಗಳನ್ನು ಹೊಲಿಯಿರಿ.

ಈಗ ನೇರ ಹೊಲಿಗೆಗಾಗಿ ಸ್ಟಿಚ್ ಪಾಟರ್ನ್ ಸೆಲೆಕ್ಟರ್ ಅನ್ನು ಎ ಗೆ ತಿರುಗಿಸಿ; ಮತ್ತು ಹೊಲಿಗೆ ಉದ್ದವನ್ನು 2.5 ಗೆ ಸೆಟ್ ಮಾಡಿ.



ಬ್ಯಾಗ್ ಪಟ್ಟಿಯೊಂದಿಗೆ ನೀವು ಪಿನ್ ಮಾಡಿದ ಬ್ಯಾಗ್ನ ಮಡಚಿದ ಅಂಚನ್ನು ಹೊಲಿಯಿರಿ. ನೀವು ಹೊಲಿಯುತ್ತಿದ್ದಂತೆ ಪಿನ್ಗಳನ್ನು ಹೊರತೆಗೆಯಲು ನೆನಪಿಡಿ.

ಪಟ್ಟಿ ಶಕ್ತಿಯುತವಾಗಿದೆ ಮತ್ತು ಅಚ್ಚುಕಟ್ಟಾದ ಮುಕ್ತಾಯವನ್ನು ನೀಡುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ವೀಡಿಯೋದಲ್ಲಿ ನೀವಿಲ್ಲಿ ಕಾಣುವಂತೆ ಜೋಡಣೆಯಿಂದ ಪ್ರಾರಂಭಿಸಿ, ಮಡಚಿದ ಜಾಗದ ಹತ್ತಿರದಲ್ಲೇ ಹೊಲಿಯಿರಿ.

ಬಲಬದಿಗೆ ಬ್ಯಾಗ್ನ ಒಳಭಾಗವನ್ನು ಹೊರಗೆ ತಿರುಗಿಸಿ ಮತ್ತು ನಿಮ್ಮ ಬ್ಯಾಗ್ ಸಿದ್ಧವಾಗಿದೆ. ಚೆನ್ನಾಗಿದೆಯಲ್ಲವೇ... ಮತ್ತು ತುಂಬಾ ಸುಲಭ!



ಮುಂದುವರಿಯಿರಿ ಮತ್ತು ಇನ್ನೂ ಕೆಲವನ್ನು ತಯಾರಿಸಿ- ಒಬ್ಬರು ಹಲವಾರು ಹ್ಯಾಂಡ್ಬ್ಯಾಗ್ಗಳನ್ನು ಹೊಂದಿರುವುದಿಲ್ಲ. ವೈಶಿಷ್ಟ್ಯಪೂರ್ಣವಾದ #MadebyMe ಟ್ಯಾಗ್ ಅನ್ನು ಸೇರಿಸಿ ಮತ್ತು ಅವುಗಳನ್ನು ತೋರಿಸಿ. ಶೀಘ್ರದಲ್ಲೇ ರಿಕ್ವೆಸ್ಟ್ಗಳನ್ನು ಕಳಿಸುವ ಸ್ನೇಹಿತರ ಕ್ಯೂವನ್ನು ನೀವು ಹೊಂದುತ್ತೀರಿ... ಮತ್ತು ಅವುಗಳು ದೊಡ್ಡ ಉಡುಗೊರೆಗಳೂ ಸಹ ಆಗಬಹುದು, ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ತಡೆಗಟ್ಟಲು ಅವುಗಳು ಸಹಾಯ ಮಾಡಿವೆ ಎಂಬುದನ್ನು ಮರೆಯದಿರಿ... ಹಾಗಾಗಿ ಈಗ ನಿಮ್ಮ ಸ್ಟೇಟ್ಮೆಂಟ್ ಬ್ಯಾಗ್ ತಯಾರಿಸುವುದನ್ನು ಮುಂದುವರಿಸಿ.